# ನವಿಲುಗನ್ನಡಿ




- ಹೊಸವರ್ಷಕ್ಕೆ ಮೊದಲ ಹೆಜ್ಜೆಯಾಗಿ 'ಮಯೂರ' ವಿವೇಕಯುಕ್ತ 'ಅಕ್ಷರದ ಉಡುಗೊರೆ'ಯನ್ನು ಓದುಗರಿಗೆ ನೀಡಿದೆ. ಕುವೆಂಪು ವಾಙ್ಮಯದಲ್ಲಿ ಅನುರಣಿಸುವ 'ಓ' ಏಕಸ್ವರ ಪದಧ್ವನಿಗಳನ್ನು ಲೇಖಕ ಜಿ.ಎಸ್. ಧನಂಜಯಮೂರ್ತಿಯವರು ಸಂದರ್ಭೋಚಿತವಾಗಿ ಉಲ್ಲೇಖಿಸುತ್ತಾ ಮೌಲಿಕ ಲೇಖನ ರೂಪಿಸಿದ್ದಾರೆ. ಈವರೆಗೆ ವಿದ್ವಾಂಸರು ಗಮನಿಸದೇ ಇದ್ದ 'ಓ'ಪದದ ಭಾವ ಮೌಲ್ಯವನ್ನು ಲೇಖಕರು ಮೊದಲ ಬಾರಿಗೆ ಹೆಕ್ಕಿ ತೆಗೆದಿದ್ದಾರೆ. ಸಂಪಾದಕೀಯದಲ್ಲಿ ಹೇಳಿರುವಂತೆ ಇದೊಂದು ಕುತೂಹಲಕರ ಹುಡುಕಾಟವೇ ಆಗಿದೆ. ಲೇಖಕರಿಗೆ ಅಭಿನಂದನೆಗಳು.

**ಪ್ರೊ.ಮಲ್ಲಿಕಾರ್ಜುನ ಕಲಮರಹಳ್ಳಿ, ಬೆಂಗಳೂರು**

- ಹೊಸವರ್ಷದ ದಿನದಂದು ಬೇಂದ್ರೆ ಮುಖಪುಟವನ್ನು ಹೊತ್ತು ಬಂದ 'ಮಯೂರ' ಹಲವಾರು ವಿಶೇಷ ಲೇಖನಗಳನ್ನು ಹೊತ್ತು ಬಂದಿತ್ತು. ಕುವೆಂಪು, ಬೇಂದ್ರೆ ಕುರಿತ ಲೇಖನ, ನಕ್ಷತ್ರಪಟದ ಕವಿತೆಗಳು ಇಷ್ಟವಾದವು. ಆದರೆ 'ಪುಟ ಬಂಗಾರ' ಕಾಣೆಯಾಗಿದ್ದು ಬೇಸರ ತರಿಸಿತು. ಮತ್ತೆ ಪುಟ ಬಂಗಾರ ಮೂಡಿಬರಲಿ.

**ರೇಷ್ಮಾ ಗುಳೇದಗುಡ್ಡಾಕರ್, ಕೊಟ್ಟೂರು**

- ಹೊಸ ವರ್ಷದ ಸಂಚಿಕೆಯಲ್ಲಿ ಕಥೆಗಾರ್ತಿ ವಿಜಯಾ ಮೋಹನ್ ಅವರ ಕಥೆ 'ಡೇಂಗ್ಯು' ಕಥೆ ತುಂಬಾ ಚೆನ್ನಾಗಿ ಬಂದಿದೆ. ಆಡುಭಾಷೆಯನ್ನು ಚೆನ್ನಾಗಿ ಬಳಸಿದ್ದಾರೆ. ಡೆಂಗಿ ಜ್ವರದಿಂದಾಗಿ ಜನರು ಪಡುವ ಪಾಡು, ಆಶಾ ಕಾರ್ಯಕರ್ತೆಯರ ಕಷ್ಟ, ಜನರ ಅಜ್ಞಾನ, ಹಳ್ಳಿಗಳ ಬದುಕನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

**ಜಿ.ಕೆ. ಕುಲಕರ್ಣಿ, ದಾವಣಗೆರೆ**

- ಜನವರಿ ಸಂಚಿಕೆಯಲ್ಲಿ ಕವಯಿತ್ರಿ ನಿರ್ಮಲಾ ಶೆಟ್ಟರ್ ಅವರ ಕವಿತೆ ಬಹಳ ಹಿಡಿಸಿತು.

**ಗುರುಮೂರ್ತಿ ತುಂಗಾತೀರೀ, ಶಿವಮೊಗ್ಗ**

- ಜನವರಿ ತಿಂಗಳ 'ಮಯೂರ'ದಲ್ಲಿ ವರಕವಿ ಬೇಂದ್ರೆ ಕವಿಯೊಬ್ಬ: ನಾಮ ಹಲವು (ದೇವು ಪತ್ತಾರ) ಲೇಖನ ಚೆನ್ನಾಗಿತ್ತು. ವಿದ್ಯಾನಗರಿ ಧಾರವಾಡದಲ್ಲಿ ಶಾಲೆ ಕಲಿತ ಕಾರಣಕ್ಕೆ ಬೇಂದ್ರೆಯವರ ಕುರಿತ ಯಾವುದೇ ಉಲ್ಲೇಖ ಥಟ್ಟನೆ ಕಣ್ಣಿಗೆ ಬೀಳುವುದು ಸಹಜ. ನನಗರಿಯದ ಅನೇಕ ವಿಚಾರಗಳನ್ನು ಪತ್ತಾರ ಅವರು ನಮೂದಿಸಿದ್ದಾರೆ. ಕೆಲವರಿಗೆ ಬೇಂದ್ರೆ ಅವರು 'ದತ್ತು' 'ದತ್ಯಾ' ಆಗಿದ್ದರು ಎಂಬುದು ಉತ್ತರ ಕರ್ನಾಟಕದ ಪದ್ಧತಿ. 1971ರಲ್ಲಿ ದತ್ಯಾ ಅವರು ಕೆ.ಇ. ಬೋರ್ಡ್ಸ್ ಶಾಲಾ ವಾರ್ಷಿಕೋತ್ಸವಕ್ಕೆ ಮುಖ್ಯ ಅತಿಥಿಯಾಗಿ ಸಾಧನಕೇರಿಯಿಂದ ಕಾಲ್ನಡಿಗೆಯಲ್ಲಿ ಬಂದದ್ದು ಇಂದಿಗೂ ಕಣ್ಣಿಗೆ ಕಟ್ಟಿದ ಹಾಗಿದೆ. ಸರಳತೆಗೆ ಮತ್ತೊಂದು ಹೆಸರೇ ಅಂಬಿಕಾತನಯ ದತ್ತ.

**ರಾಜೀವ್ ಎನ್. ಮಾಗಲ್, ಸಕಲೇಶಪುರ**

- 'ಮೂರನೆಯ ಕಣ್ಣು' ಕಥೆ (ಎಂ. ನಾಗರಾಜ ಶೆಟ್ಟಿ) ಕುತೂಹಲದಿಂದ ಓದಿಸಿಕೊಂಡಿತು. ಕಥಾನಾಯಕಿ ಚೈತ್ರಾ ಪಾತ್ರದ ಬಗ್ಗೆ ಕನಿಕರದ ಜತೆಗೆ ಹೆಮ್ಮೆ ಮೂಡಿಸುತ್ತಲೇ ಅಂತ್ಯದಲ್ಲಿ ಪಡೆದ ದುರಂತ ತಿರುವು ಬೇಸರ ಮೂಡಿಸಿತು.

**ಸು.ರಾ.ನ. ಪ್ರಸಾದ್, ಕುಣಿಗಲ್**